

## ಅನಾಥ ಶವಗಳ ಬಂಧು ಮಿತ್ರ

ಅ. 29ರ ಸಂಚಿಕೆಯಲ್ಲಿ ಕೆ. ಓಂಕಾರಮೂರ್ತಿ ಬರೆದಿರುವ ‘ಅನಾಥ ಶವಗಳಿಗೊಬ್ಬ ಬಂಧು–ಮಿತ್ರ’ ಲೇಖನ ಓದಿದೆ. ಈಗಿನ ಕಾಲದಲ್ಲಿಯೂ ಆಯುಬ್ ಅಹಮದ್ ಅವರಂಥ ಹೃದಯ ಸಿರಿವಂತರು ಇದ್ದಾರೆಂದು ನಂಬಲು ಸಾಧ್ಯವಾಗುತ್ತಿಲ್ಲ. ಅಂತಹವರ ಸಂಖ್ಯೆ ಜಾಸ್ತಿ ಆಗಲಿ.

–ಪ್ರಭಾಕರ್, ಹಾವೇರಿ

## ಕೋವಿದ ವೇದಾಂತ

ಅ.22ರ ಸಂಚಿಕೆಯಲ್ಲಿ ಉದ್ಯಾವರ ಮಾಧವ ಆಚಾರ್ಯ ಅವರು ಬರೆದ ‘ಕೋವಿದ ವೇದಾಂತ’ ಕಥೆಯ ನಿರೂಪಣೆ ಮನಸೆಳೆಯುತ್ತದೆ. ಕೊರೊನಾ ದೆಸೆಯಿಂದ ಮೂವತ್ತು ವರುಷಗಳ ಮೌನ ವ್ರತಕ್ಕೆ ತೆರೆ ಎಳೆದು ಹಳೆಯ ಬದುಕನ್ನು ಹೊಸದಾಗಿ ಕಂಡರಲ್ಲಾ ಆ ದಂಪತಿಗಳು.

–ಸುಮಾ ಗುರುರಾಜ್

ಜಗತ್ತನ್ನೆಲ್ಲ ಸಾವಿನ ಬೀಜ ಆವರಿಸಿರುವ ಈ ಕ್ಷಣದಲ್ಲಿ ಬಾಬಯ್ಯ ಮತ್ತು ಗೌರಮ್ಮ ಭರವಸೆಯ ಹೂವನ್ನರಳಿಸತೊಡಗಿದರು. ಹೂಮುತ್ತಿನ ಸುರಿಮಳೆಯ ನಡುವೆ ಉದ್ಯಾವರ ಅವರು ಕೊರೊನಾಗೆ ಕಂಡುಹಿಡಿದ ವ್ಯಾಕ್ಸಿನ್ ಖಂಡಿತವಾಗಿಯೂ ಕೆಲಸ ಮಾಡುತ್ತೆ.

–ದೇವಿಸಾ

## ಮಹಾರಾಣಿ ಸತ್ಯ ಪ್ರೇಮಕುಮಾರಿ

ಅ. 22ರ ಸಂಚಿಕೆಯಲ್ಲಿ ‘ಮೈಸೂರು ಇತಿಹಾಸದ ಮರೆತ ಪುಟಗಳು’ ಎಂಬ ಶೀರ್ಷಿಕೆಯಡಿಯಲ್ಲಿ ಡಿ. ಜಿ. ಮಲ್ಲಿಕಾರ್ಜುನ ಅವರು ಬರೆದಿರುವ ಮಹಾರಾಣಿ ಸತ್ಯ ಪ್ರೇಮಕುಮಾರಿ ದೇವಿಯವರ ಕುರಿತು ಲೇಖನ ಮಾಹಿತಿಪೂರ್ಣವಾಗಿದೆ. ಜಯಚಾಮರಾಜ ಒಡೆಯರ್ ಅವರು ಸತ್ಯ ಪ್ರೇಮಕುಮಾರಿ ದೇವಿಯವರೊಂದಿಗೆ ನಡೆಸಿದ ದಾಂಪತ್ಯ ಅಲ್ಪಾಯುಷಿಯಾಗಿದ್ದರೂ ಇತಿಹಾಸದ ಪುಟದಿಂದ ಅಳಿಸಲಾರದ್ದು.

–ಸಂಜೀವಕುಮಾರ ಅತಿವಾಳೆ, ಬೀದರ

ನಮ್ಮ ತಾಯಿಯವರಿಗೆ ಈಗ 90 ವರ್ಷ. ಅವರ ತಾತ ಸಕಲೇಶಪುರ ವೆಂಕಟ ಕೃಷ್ಣಯ್ಯ ಆಗಿನ ಕಾಲದ ಪ್ರಸಿದ್ಧ ನ್ಯಾಯಾಧೀಶರು. ಯುವರಾಜರಿಗೆ ಆಪ್ತರಾಗಿದ್ದವರು. ಯುವರಾಜರ ಉಯಿಲು ಬರೆದದ್ದು ಅವರೇ. ನಮ್ಮ ತಾಯಿ ಚಿಕ್ಕ ಹುಡುಗಿ ಆಗಿದ್ದಾಗಿನ ಘಟನೆ. ಅರಮನೆಯಿಂದ ಯುವರಾಜರು ಕಳಿಸಿದ ‘ಈಗಲೇ ಹೊರಟು ಬನ್ನಿ’ ಅನ್ನುವ ಸಂದೇಶ ನೋಡಿ ಅವರ ತಾತ ತಕ್ಷಣ ಮೈಸೂರಿಗೆ ಹೋದರು. ವಾಪಸ್ಸು ಬಂದಾಗ, ‘ಜಯಚಾಮರಾಜ ಒಡೆಯರ್ ಅವರು ಸತ್ಯಪ್ರೇಮ ಕುಮಾರಿಯವರನ್ನು ಬಿಟ್ಟು ಬಿಡುತ್ತಾರಂತೆ. ಎಲ್ಲರೂ ಪರಿಪರಿಯಾಗಿ ಬೇಡಿಕೊಂಡರೂ ಒಪ್ಪಲಿಲ್ಲ. ಆಕೆ ಎಲ್ಲಾ ವಿಧದಲ್ಲೂ ದೇವತೆಯಂತೆ ಇದ್ದಾರೆ. ಏನುಮಾಡಿದರೂ ಒಪ್ಪಲಿಲ್ಲ’ ಅಂತ ತುಂಬಾ ನೊಂದುಕೊಂಡರಂತೆ. ಆಮೇಲೆ ಅವರು ಅರಮನೆಯ ಸಂಬಂಧ ಕಡಿಮೆ ಮಾಡಿಕೊಂಡರಂತೆ. ಯುವರಾಜರು ತಮ್ಮ ಉಯಿಲು ಬರೆಸಿದ ದಿನದ ಒಂದು ಗ್ರೂಪ್ ಫೋಟೊ ನಮ್ಮ ಮುತ್ತಾತನ ಮನೆಯಲ್ಲಿತ್ತು. ಯಾವಾಗಲೋ ಮಳೆಯಲ್ಲಿ ನೆನೆದು ಹಾಳಾಯಿತು.

–ಎಚ್.ವಿ. ಸುಮನ್, ಬೆಂಗಳೂರು

ದಸರಾ ಸಂದರ್ಭದಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಹಾಗೂ ಸತ್ಯಪ್ರೇಮಕುಮಾರಿ ದೇವಿ ಅವರನ್ನು ಸ್ಮರಿಸಿದ್ದು ಅತ್ಯಂತ ಶ್ಲಾಘನೀಯ.

–ವಿ.ಎಸ್. ಪದ್ಮನಾಭಾಚಾರ್

ಜಯಚಾಮರಾಜ ಒಡೆಯರ್ ಅವರ ಮೊದಲ ಮಡದಿ ಸತ್ಯಪ್ರೇಮಕುಮಾರಿ ದೇವಿಯವರ ಬಗ್ಗೆ ಗೊತ್ತಿಲ್ಲದ, ಹಾಗೂ ಗೊತ್ತಿದ್ದ ಕೆಲವೇ ಮಂದಿಯ ನೆನಪಿನಿಂದ ಮಾಸಿಹೋಗಿದ್ದ ಹಲವು ವಿಚಾರಗಳನ್ನು ಈ ಲೇಖನ ನೆನಪಿಸಿದೆ.

–ಎನ್. ಆನಂದ ರಾಮ ರಾವ್

ಇನ್ನೊಂದು ಗಾಳಿಸುದ್ದಿ ಅಂದು ಪ್ರಚಲಿತವಾಗಿತ್ತು. ಅದೆಂದರೆ ರಾಜಮಾತೆಯೊಂದಿಗೆ ಮಹಾರಾಣಿ ಹೊಂದಿದ್ದ ಭಿನ್ನಾಭಿಪ್ರಾಯದ ಕಾರಣ ಸತ್ಯಪ್ರೇಮಕುಮಾರಿಯವರೊಂದಿಗೆ ಸಂಸಾರ ನಡೆಸುವುದಿಲ್ಲವೆಂದು ಜಯಚಾಮರಾಜ ಒಡೆಯರ್ ಅವರಿಂದ ರಾಜಮಾತೆ ಭಾಷೆಯನ್ನು ತೆಗೆದುಕೊಂಡಿದ್ದರೆಂಬುದೇ ಆ ಗಾಳಿಸುದ್ದಿ. ಜಯಚಾಮರಾಜರ ನಿಧನದ ವೇಳೆ ಮೈಸೂರಿಗೆ ಬಂದ ಸತ್ಯಪ್ರೇಮ ಕುಮಾರಿಯವರನ್ನು ಕಾಣಲು ಮೈಸೂರ ಜನತೆ ಧಾವಿಸಿದ್ದನ್ನು ಎಂದೂ ಮರೆಯಲಾಗದು.

–ಕೊ.ಸು. ನರಸಿಂಹ ಮೂರ್ತಿ, ಮೈಸೂರು

ಲೇಖನ ಮಾಹಿತಿಪೂರ್ಣವಾಗಿತ್ತು. ಇಂತಹ ಲೇಖನ ಇಂದಿನ ಪೀಳಿಗೆಗೆ ರೋಚಕವಾಗಿರುತ್ತದೆ ಮತ್ತು ಅಂದಿನ ತಲೆಮಾರಿನ ಜನಕ್ಕೆ ನೆನಪುಗಳ ಸುಖದ ಅನುಭವ ಕೊಡಬಹುದು.

–ಎನ್. ರಾಘವನ್, ಬೆಂಗಳೂರು

## ಹೆಲಿಕಾಪ್ಟರ್ ಪೇರೆಂಟಿಂಗ್

ಅ. 22ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಅವರು ಬರೆದಿರುವ ‘ಹೆಲಿಕಾಪ್ಟರ್ ಪೇರೆಂಟಿಂಗ್’ ಲೇಖನ ಚೆನ್ನಾಗಿದೆ. ಯಶಸ್ವಿ ಜೀವನಕ್ಕೆ ಅವಶ್ಯವಿರುವ ಸ್ವ ಆಲೋಚನಾ ಶಕ್ತಿಯನ್ನು ಮಕ್ಕಳಲ್ಲಿ ತುಂಬುವ ಪ್ರಯತ್ನವಾಗದಿದ್ದರೆ ಮುಂಬರುವ ಪೀಳಿಗೆಗಳ ಜೀವನ ಯಾಂತ್ರಿಕವಾಗುವುದು ಸತ್ಯ.

–ರಾಜೀವ್ ಮಾಗಲ್, ಹಾಸನ

ಹೆಲಿಕಾಪ್ಟರ್ ಪೇರೆಂಟಿಂಗ್ ಸಮಯೋಚಿತ ಲೇಖನವಾಗಿದೆ. ಇಂದಿನ ಮಕ್ಕಳಿಗೆ ಬಾಲ್ಯವೇ ಇಲ್ಲ. ನಮ್ಮ ಕಾಲದಲ್ಲಿ ನಾವು ಆಡಿದ ಆಟಗಳು, ಅಜ್ಜಿ ಮನೆಯ ಕೈ ತುತ್ತು, ಗೆಳೆಯ ಗೆಳತಿಯರೊಡನೆ ಸೇರಿ ಮನೆಯಲ್ಲೇ ಸೀರೆಯ ಪರದೆ ಕಟ್ಟಿಕೊಂಡು ಅಭಿನಯಿಸುತ್ತಿದ್ದ ನಾಟಕಗಳು, ಇಂದಿನ ಮಕ್ಕಳಿಗೆ ಮರೀಚಿಕೆ ಎಂದರೆ ತಪ್ಪಲ್ಲ. ದಯವಿಟ್ಟು ಮಕ್ಕಳಿಗೆ ಸ್ವಾತಂತ್ರ್ಯ ಕೊಡಿ. ಹೆಚ್ಚಿನ ಕಾಲ ನೀವು ಅವರ ಜೊತೆಯಲ್ಲಿರಿ. ಸಂಬಂಧಗಳ ಪರಿಚಯ ಮಾಡಿ. ಅವರು ಆಯ್ಕೆಗೆ ಅವಕಾಶ ನೀಡಿ.

–ಸಿ.ಎಸ್. ಮುಕ್ತಾ

ಪೋಷಕರು ತಮ್ಮ ಮಕ್ಕಳ ಮೇಲೆ ತಮ್ಮ ಆಸೆಗಳ ಹೇರಿಕೆ ಮಾಡುತ್ತಿರುವ ಕಾಲಘಟ್ಟದಲ್ಲಿ ಸ್ವಯಂಪ್ರಭಾ ಅವರ ಲೇಖನ ಪೋಷಕರ ಕಣ್ಣು ತೆರೆಸುವಂತಿದೆ. ಇನ್ನಾದರೂ ಮಕ್ಕಳು ಅಪ್ಪಚ್ಚಿಯಾಗದೆ, ಗುಬ್ಬಚ್ಚಿಗಳಂತೆ ಹಾರಾಡುವಂತಾಗಲಿ.

–ಮಲ್ಲಿಕಾರ್ಜುನ ಸುರಧೇನುಪುರ

## ಆಕರ್ಷಕ ಮುಖಪುಟ



ಶರನ್ನವರಾತ್ರಿ ದಸರಾ ಹಬ್ಬದ ಸುಂದರ ಮುಖಪುಟ ಹೊತ್ತುತಂದ ಸುಧಾಳಿಗೆ ಧನ್ಯವಾದ. 1948ರ ಸಮಯದಲ್ಲಿ ನನ್ನ ತಂದೆಯವರು ಬರೆದಿದ್ದ ಅಪರೂಪದ ದೇವಿ ಚಿತ್ರವೊಂದನ್ನು, ಸುಧಾಳಿಗೆ ಉಡುಗೊರೆಯಾಗಿ ಕಳಿಸಿದ್ದೇನೆ.

–ಸುಮನಾ

## ವಿಚಾರ ಲಹರಿ

ಅಮೃತಮತಿ ಅವರ ವಿಚಾರ ಲಹರಿ ‘ಹಾಸುಂಡು ಬೀಸಿ ಒಗೆದಂಗೆ’ (ಅ. 22) ಓದುತ್ತಿದ್ದಾಗ ಕಣ್ಣುಗಳು ತೇವವಾದವು. ಲೈಂಗಿಕ ದೌರ್ಜನ್ಯದ ಹಲವು ಮುಖಗಳ ಅನಾವರಣ ಮತ್ತು ‘ನಾಡನ್ನು ದೇವತೆಯಾಗಿ ಗೌರವಿಸುವ ನಾವು ಹೆಣ್ಣನ್ನು ಮುಕ್ಕಿ ತಿನ್ನುವ ಅಮಾನವೀಯ ಜನರು’ ಸಾಲುಗಳು ಮನಸ್ಸನ್ನು ಗಾಸಿಗೊಳಿಸಿದವು.

–ಕೆ. ಹೊನ್ನಪ್ಪ, ಕ್ಯಾತ್ಸಂದ್ರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in